# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ

**ಸ್ಪೆಶಲ್ (Corruption)ಕೇಸ್ ನಂ.7/2021**

**ಡಿಡಬ್ಲ್ಯೂ- 01**

ಸಾಕ್ಷಿದಾರರ ಹೆಸರು : ಮಹಾದೇವ ಬಿರಾದಾರ

ತಂದೆಯ ಹೆಸರು : ಸಿದ್ದರಾಯ

ವಯಸ್ಸು : **63** ವರ್ಷ

ಉದ್ಯೋಗ :ಒಕ್ಕಲುತನ

ವಾಸಸ್ಥಳ : ದೇವನಗಾಂವ, ಚಡಚಣ.

**ಸಾಕ್ಷಿಗೆ ಇಂದು ದಿನಾಂಕ :- 24/06/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :-ಶ್ರೀ ಜಿ.ಎ.ಎ. ವಕೀಲರಿಂದ ಆರೋಪಿ ಪರಃ**

1. ದೇವನಗಾಂವ ಗ್ರಾಮದಲ್ಲಿ ನನಗೆ ಸಂಬಂಧಿಸಿದ ಸರ್ವೆ ನಂ.48/1 ಬಿ ಹೊಸ ಸರ್ವೆ ನಂ.48/8 ರಲ್ಲಿ ಒಟ್ಟು 4 ಎಕರೆ 5 ಗುಂಟೆ ಜಮೀನಿದ್ದು, ಅದರಲ್ಲಿ ಒಟ್ಟು 20 ಗುಂಟೆ ಜಮೀನು ಕಾಲುವೆಗಾಗಿ ಭೂಸ್ವಾಧೀನ ಆಗಿರುತ್ತದೆ. ಸದರಿ ಜಮೀನು ಭೂ ಸ್ವಾಧೀನ ಆದ ಬಗ್ಗೆ ಒಪ್ಪಿಗೆ ಐತೀರ್ಪು ಆಗಿತ್ತು.

2. ನನಗೆ ಒಟ್ಟು 4 ಜನ ಮಕ್ಕಳು. ದಿ:08.01.2020 ರಂದು ನಾನು ಐತೀರ್ಪಿನ ಪ್ರತಿಯನ್ನು ಪಡೆದುಕೊಳ್ಳಲು ಇಂಡಿಯಲ್ಲಿರುವ ಭೂ ಸ್ವಾಧೀನ ಅಧಿಕಾರಿಗಳ ಕಚೇರಿಗೆ ಹೋಗಿದ್ದೆ. ಅಲ್ಲಿ ಆರೋಪಿಯನ್ನು ಭೇಟಿ ಆಗಿರುತ್ತೇನೆ. ಆಗ ಊಟದ ಸಮಯ ಆಗಿತ್ತು. ಆರೋಪಿಯು ಊಟಕ್ಕೆ ಎದ್ದಿದ್ದರು. ಆ ಸಮಯದಲ್ಲಿ ಯಾರೋ ಒಬ್ಬ ಬಂದು ಆರೋಪಿಗೆ ಹಣ ತೆಗೆದುಕೊಳ್ಳಿ ಎಂದು ಹೇಳಿದರು. ಆಗ ಆರೋಪಿ ನಾನು ಊಟಕ್ಕೆ ಎದ್ದಿದ್ದೇನೆ, ನನಗೆ ರೊಕ್ಕ ಬೇಡ ಊಟ ಆದ ಮೇಲೆ ನಿಮ್ಮ ಕೆಲಸ ಮಾಡುತ್ತೇನೆ ಎಂದು ಹೇಳಿದ. ಆಗ ಆ ವ್ಯಕ್ತಿಯು ಆರೋಪಿಯ ಹಿಂದಿನ ಪ್ಯಾಂಟ ಜೇಬಿಗೆ ಹಣವನ್ನು ಇಟ್ಟ. ಅಷ್ಟರಲ್ಲಿ 3-4 ಜನ ಬಾಗಿಲ ಬಳಿ ಇದ್ದವರು ಒಳಗಡೆ ಬಂದು ಸಾಹೇಬರ ಕೈಹಿಡಿದು,

ಕಿಸೆಯಿಂದ ರೊಕ್ಕವನ್ನು ತೆಗೆದು ಮೇಜಿನ ಮೇಲೆ ಇಟ್ಟರು. ಒಳಗಡೆ ಇದ್ದ ಸಾರ್ವಜನಿಕರನ್ನು ಹೊಡೆದು ಹೊರಗಡೆ ಹಾಕಿದರು. ನಾವು ಅಲ್ಲಿಂದ ಹೋದೆವು. ನನ್ನ ಜಮೀನಿನ ಪಹಣಿ ಪತ್ರಿಕೆ ಮತ್ತು ಒಪ್ಪಿಗೆ ಐತೀರ್ಪಿನ ಎರಡು ಧೃಡಿಕೃತ ನಕಲನ್ನು ಈಗ ಹಾಜರು ಪಡೆಸುತ್ತಿದ್ದೇನೆ. ಅದನ್ನು ನಿ.ಡಿ.1 ರಿಂದ ನಿ.ಡಿ.3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ವಿಶೇಷ ಸರಕಾರಿ ಅಭಿಯೋಜಕರವರಿಂದ:-**

3. ಆರೋಪಿಯ ಊರು ಇಂಡಿ ತಾಲೂಕಿನ ಹೀರೆಬೇವನೂರು. ಆರೋಪಿಯ ಪರಿಚಯ ನನಗೆ ನಮ್ಮ ಜಮೀನು ಕಾಲುವೆ ಭೂ ಸ್ವಾಧೀನ ಆದ ನಂತರದಿಂದ ಪರಿಚಯ. ಆರೋಪಿಯು ನನಗೆ ಸಂಬಂಧಿಕನಾಗಿರುವುದಿಲ್ಲ. ನಮ್ಮ ಜಮೀನಿಗೆ ಅಂದಾಜು ರೂ.63,000/- ಪರಿಹಾರ ನೀಡಿರುತ್ತಾರೆ. ನಮ್ಮೂರಿನಿಂದ ಆರೋಪಿಯ ಊರಿಗೆ ಅಂದಾಜು 60 ಕಿ.ಮೀ. ದೂರ ಇದೆ. ಆರೋಪಿಯು ಈಗ ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಘಟನೆಯನ್ನು ಪೋಲಿಸರಿಗೆ ನಾನು ಹೇಳಿರುವುದಿಲ್ಲ. ಕಾರಣ ನಮ್ಮನ್ನು ಒಳಗಡೆ ಬಿಟ್ಟಿರುವುದಿಲ್ಲ. ನಾನು ಕಚೇರಿಯಿಂದ ಹೊರಗಡೆ ಬಂದ ನಂತರ ನಮ್ಮೂರಿಗೆ ಹೋಗಿರುತ್ತೇನೆ. ಆ ದಿನ ಆರೋಪಿಯ ಕಚೇರಿಗೆ ಬಂದ ಪೋಲಿಸರು ಯಾರು ಎಂದು ನನಗೆ ಗೊತ್ತಿಲ್ಲ. ಆ ದಿನ ಆರೋಪಿಯ ಪ್ಯಾಂಟ ಕಿಸೆಗೆ ಹಣವನ್ನು ಹಾಕಿದವನು ಯಾರು ಎಂದು ನನಗೆ ಗೊತ್ತಿಲ್ಲ. ಆತನ ಹೆಸರು ಮತ್ತು ಪರಿಚಯ ನನಗೆ ಇಲ್ಲ.

4. ಆರೋಪಿಯ ಕಚೇರಿಗೆ ಇಂಡಿ ರೈಲ್ವೆ ನಿಲ್ದಾಣದ ಸಮೀಪ ಇದೆ ಎಂದರೆ ಸರಿ. ಸದರಿ ಕಚೇರಿಯ ಸುತ್ತಮುತ್ತ ಸಾಕಷ್ಟು ಜನಸಂದಣಿ ಇರುತ್ತದೆ ಎಂದರೆ ಸರಿ. ಆ ದಿನ

ಆರೋಪಿಯಯ ಕಚೇರಿಯಲ್ಲಿ ನನಗೆ ಸಂಬಂಧಿಸಿದ ಯಾವುದೇ ಕೆಲಸ ಆಗಿರಲಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಮತ್ತು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.